ಬೆಂಗಳೂರಿನ ಹೊರವಲಯದ ಬಡಾವಣೆಯೊಂದರ ಆದಿತ್ಯ ಅಪಾರ್ಟ್‌ಮೆಂಟಿನ ಮೂರನೇ ಮಹಡಿಯ ಮುನ್ನೂರ ನಾಲ್ಕನೇ ನಂಬರಿನ ಫ್ಲಾಟ್‌ಗೆ ಬಾಡಿಗೆ ಹೋಗುವ ಬಗ್ಗೆ ಶಶಾಂಕ ಮತ್ತು ಶ್ರುತಿ ಕರಾರು ಅಂತಿಮಗೊಳಿಸಿ ಹದಿನೈದು ದಿನಗಳ ಹಿಂದೆಯೆ ಮುಂಗಡ ಹಣವನ್ನೂ ಕೊಟ್ಟಾಗಿತ್ತು.

ಈಗ ತಾವಿದ್ದ ಸಿಂಗಲ್ ಬಿಎಚ್‌ಕೆ ಫ್ಲಾಟ್‌ನಿಂದ 2 ಬಿಎಚ್‌ಕೆ ಫ್ಲಾಟ್‌ಗೆ ಸ್ಥಳಾಂತರಗೊಳ್ಳಲು ಅವರಿಗೆ ಕೊನೆಪಕ್ಷ ಎರಡು ಮೂರು ದಿನಗಳಾದರೂ ಬೇಕಿತ್ತು. ಶಶಾಂಕ ಮತ್ತು ಶ್ರುತಿ ಮದುವೆ ನಡೆದದ್ದು ಆರು ತಿಂಗಳ ಕೆಳಗೆ. ಆಗ ತುರ್ತಾಗಿ ಸಿಕ್ಕ ಚಿಕ್ಕದಾದ ಫ್ಲಾಟ್‌ನಲ್ಲಿ ಕೆಲವು ದಿನಗಳ ಕಾಲ ಹೇಗೋ ಇದ್ದರು. ಮನೆ ಸಾಮಾನುಗಳು ಮದುವೆಯಾದ ಮೇಲೆ ಸಹಜವಾಗಿಯೇ ಹೆಚ್ಚಾಗಿದ್ದವು. ದೊಡ್ಡದಾದ ಫ್ರಿಜ್, ವಾಶಿಂಗ್ ಮಶೀನು, ದೊಡ್ಡದಾದ ಟೀವಿ, ಹಾಲಿಗೆಂದು ದೊಡ್ಡದಾದ ಸೋಫಾ ಸೆಟ್, ಉಳಿದಂತೆ ಅಡುಗೆ ಮನೆಯ ಸಾಮಾನುಗಳು, ಶಶಾಂಕನ ಅಪ್ಪ–ಅಮ್ಮ ಅಥವಾ ಶ್ರುತಿಯ ಅಪ್ಪ–ಅಮ್ಮ ಬಂದು ಹೋಗುವ ಕಾರಣಕ್ಕೆ ಹೆಚ್ಚಿನ ಒಂದು ಡಬಲ್ ಕಾಟು, ಇತ್ಯಾದಿ ಸಾಮಾನುಗಳು ಶಿಫ್ಟಾಗಬೇಕಿತ್ತು. ಶಶಾಂಕ ಮತ್ತು ಶ್ರುತಿ ಇಬ್ಬರೂ ಸೋಮವಾರಕ್ಕೆ ಒಂದು ದಿನ ರಜೆ ಹಾಕಿ ಶನಿವಾರ ಸಾಮಾನು ಕಟ್ಟಲು ನಿರ್ಧರಿಸಿ, ಭಾನುವಾರ ಹಳೆ ಅಪಾರ್ಟ್‌ಮೆಂಟಿನ ಫ್ಲಾಟ್‌ನಿಂದ ಸಾಮಾನುಗಳು ಹೊಸ ಅಪಾರ್ಟ್‌ಮೆಂಟಿನ ಮುನ್ನೂರ ನಾಲ್ಕನೇ ನಂಬರಿನ ಫ್ಲಾಟ್‌ಗೆ ಶಿಫ್ಟಾದವು. ಆಗ ಪರಿಚಯವಾದವನೇ ಆದಿತ್ಯ ಅಪಾರ್ಟಮೆಂಟಿನ ಸೆಕ್ಯುರಿಟಿ ಗಾರ್ಡ್ ಗಂಗಾರಾಮ್. ಈತ ಮೂಲತಃ ನೇಪಾಳದವನಂತೆ.

ಗಂಗಾರಾಮ್‌ಗೆ ಇಪ್ಪತ್ತೆಂಟೋ ಮೂವತ್ತೋ ವಯಸ್ಸಿರಬೇಕು, ಅವನು ಕಳೆದ ಎರಡು ವರ್ಷದಿಂದ ಬೆಂಗಳೂರಲ್ಲಿ ವಾಸವಾಗಿದ್ದಾನೆ. ಅವನ ಅಣ್ಣ ಚಾಂದರಾಮ್ ಮೂಲಕ ಗಂಗಾರಾಮ್‌ಗೆ ಬೆಂಗಳೂರಿನ ಪರಿಚಯವಾದದ್ದು. ಅವರಣ್ಣ ನಾಕಾರು ವರ್ಷದಿಂದ ಬೆಂಗಳೂರಲ್ಲಿ ಯಾವುದೋ ಒಂದು ಕನ್‌ಸ್ಟ್ರಕ್ಷನ್ ಕಂಪನಿಯಲ್ಲಿ ಕೆಲಸ ಹುಡುಕಿಕೊಂಡು ಅದಾಗಲೇ ಸಂಸಾರ ಹೂಡಿದ್ದ.

ಐದು ಅಂತಸ್ತಿನ ಅಪಾರ್ಟ್‌ಮೆಂಟಿಗೆ ಗಂಗಾರಾಮ್ ಒಬ್ಬನೇ ಸೆಕ್ಯೂರಿಟಿ ಗಾರ್ಡ್. ಗಂಗಾರಾಮ್‌ನ ಹೆಂಡತಿ ಚಂಪಾದೇವಿ. ಆಕೆಗೆ ಇಪ್ಪತ್ತೈದೋ ಇಪ್ಪತ್ತಾರೋ ವಯಸ್ಸಿರಬೇಕು. ಗಂಗಾರಾಮ್ ಎರಡು ವರ್ಷಗಳ ಹಿಂದೆ ಆಕೆಯನ್ನು ಪ್ರೀತಿಸಿ, ನೇಪಾಳದ ಕಠಮಂಡುವಿನ ಬಳಿಯ ಹಳ್ಳಿಯೊಂದರಿಂದ ಓಡಿಸಿಕೊಂಡು ಬಂದು ಬೆಂಗಳೂರಲ್ಲಿ ತಳ ಊರಿದ್ದ. ಈಗ ಅವನಿಗೆ ಒಂಬತ್ತು ತಿಂಗಳ ಒಂದು ಗಂಡು ಮಗುವಿದೆ. ಅದನ್ನು 'ಬಬ್ಲೂ' ಎಂದೆ ಕರೆಯುತ್ತಿದ್ದರು.

ಐದು ಅಂತಸ್ತಿನ ಒಟ್ಟು ಐವತ್ತು ಫ್ಲಾಟ್‌ಗಳಿಗೆ ಗಂಗಾರಾಮ್ ಒಬ್ಬನೇ ನಿಗಾ ಇಡಬೇಕಿತ್ತು. ಎಲ್ಲ ಆಗುಹೋಗುಗಳಿಗೆ ಅವನೇ ಜವಾಬುದಾರ. ಒಬ್ಬನೆ 24/7 ಡ್ಯೂಟಿ ಮಾಡಬೇಕು. ಅಪಾರ್ಟ್‌ಮೆಂಟಿಗೆ ಬಂದು ಹೋಗುವವರನ್ನು, ಅಂಚೆ, ಕೊರಿಯರ್, ಫುಡ್ ಡೆಲಿವರಿ ಬಾಯ್ಸ್... ಹೀಗೆ ಎಲ್ಲರ ಚಲನವಲನಗಳ ಮೇಲೂ ಗಮನ ಇಡಬೇಕು. ಹೋಗಿ ಬರುವ ಕಾರು, ಬೈಕುಗಳ ಮೇಲೂ ಕಣ್ಣಿಟ್ಟಿರಬೇಕು. ಈಗೀಗ ಅಪಾರ್ಟ್‌ಮೆಂಟಿನಲ್ಲಿ ಬಟ್ಟೆ, ಕಿರಾಣಿ ಸಾಮಾನು, ಮಕ್ಕಳ ಅಗತ್ಯ ವಸ್ತುಗಳು, ಊಟ, ತಿಂಡಿಯೂ ಸೇರಿದಂತೆ ಬಹುತೇಕ ವಸ್ತುಗಳು ಆನ್‌ಲೈನ್ ಮೂಲಕವೇ ಬರುವುದು ಹೆಚ್ಚಾಗಿದ್ದರಿಂದ ಗಂಗಾರಾಮ್ ಅವೆಲ್ಲವನ್ನೂ ಗಮನಿಸಬೇಕಿತ್ತು. ರಾತ್ರಿ ಹತ್ತೂವರೆಗೆ ಅಪಾರ್ಟ್‌ಮೆಂಟಿನ ಮುಖ್ಯದ್ವಾರ ಹಾಕಿದರೆ ಮುಗಿಯಿತು, ಬೆಳಗ್ಗೆ ಐದರ ಸುಮಾರಿಗೆ ಅದರ ಕೀಲಿ ತೆರವುಗೊಳಿಸುತ್ತಿದ್ದ ಗಂಗಾರಾಮ್. ಬೆಳಗಿನ ಜಾವದಲ್ಲಿ ಕೆಲವರು ವಾಕಿಂಗ್ ಹೋಗುವವರು, ಜಾಗಿಂಗ್ ಹೋಗುವವರಿಗೂ ಇದು ಅನುಕೂಲವಾಗುತ್ತಿತ್ತು.

ಗಂಗಾರಾಮ್‌ನ ಕೆಲಸದಲ್ಲಿ ಅವನ ಹೆಂಡತಿ ಚಂಪಾದೇವಿಯೂ ಒಂದಷ್ಟು ಸಹಾಯ ಮಾಡುತ್ತಿದ್ದಳು. ಅದೇ ಅಪಾರ್ಟ್‌ಮೆಂಟಿನ ಎರಡು ಮನೆಗಳಲ್ಲಿ, ಪಕ್ಕದ ಅಪಾರ್ಟ್‌ಮೆಂಟಿನ ಒಂದು ಮನೆಯಲ್ಲಿ ಆಕೆ ಮನೆಗೆಲಸ ಹಾಗೂ ಒಂದಷ್ಟು ಅಡುಗೆ ಕೆಲಸ ಮಾಡುತ್ತಿದ್ದಳು. ಇದರಿಂದ ಆಕೆಯೂ ಹತ್ತು ಹನ್ನೆರಡು ಸಾವಿರ ಗಳಿಸುತ್ತಿದ್ದಳು. ಗಂಗಾರಾಮ್ ಹೊಸಬರು ಯಾರಾದರೂ ಅಪಾರ್ಟ್‌ಮೆಂಟಿನ ಫ್ಲಾಟ್‌ಗೆ ಬಂದರೆ ಅವರೊಂದಿಗೆ ಬಹು ಬೇಗ ಸ್ನೇಹ ಸಂಪಾದಿಸಿಕೊಳ್ಳುತ್ತಿದ್ದ.

ವಿಚಿತ್ರವೆಂದರೆ ಗಂಗಾರಾಮ್ ಬೆಂಗಳೂರಿನವನೂ ಅಲ್ಲ, ಭಾರತದವನೂ ಅಲ್ಲ. ನೆರೆಯ ನೇಪಾಳದವನಂತೆ. ಅವನು ಅಷ್ಟು ದೂರದಿಂದ ಕರ್ನಾಟಕಕ್ಕೆ, ಅದರಲ್ಲೂ ಬೆಂಗಳೂರಿಗೆ ಬಂದದ್ದೇ ಒಂದು ವಿಸ್ಮಯ.

ನೇಪಾಳದ ರಾಜಧಾನಿ ಕಠ್ಮಂಡು ಹತ್ತಿರದ ಒಂದು ಹಳ್ಳಿಯವನು ಗಂಗಾರಾಮ್. ಊರಲ್ಲಿ ಅವನಿಗೆ ಇನ್ನೊಬ್ಬ ಅಣ್ಣ ಮತ್ತು ತಾಯಿ ಇದ್ದರು. ಊರಲ್ಲಿದ್ದ ಅಣ್ಣ ಸಂತಾರಾಮ್ ತಂದೆಯಿಂದ ಬಂದಿದ್ದ ಒಂದಷ್ಟು ಪಿತ್ರಾರ್ಜಿತ ಭೂಮಿಯ ದೇಖರೇಖಿ ಮಾಡಿಕೊಂಡು ತಾಯಿಯೊಂದಿಗೆ ಹಳ್ಳಿಯಲ್ಲೇ ನೆಲೆಯೂರಿದ್ದ. ಗಂಗಾರಾಮ್‌ನನ್ನು ಬೆಂಗಳೂರಿಗೆ ಬರಲು ಪುಸಲಾಯಿಸಿದ್ದು ಅವನ ಅಣ್ಣ ಚಾಂದರಾಮ್ ಅಂದೆನಲ್ಲ... ಅವನೂ ಬೆಂಗಳೂರಿಗೆ ಬರಲು ಕಾರಣವೂ ಅವನೂ ಒಬ್ಬ ಹುಡುಗಿಯನ್ನು ಓಡಿಸಿಕೊಂಡು ಬಂದಿದ್ದವನೆ. ಅವಳು ಬೇರಾರೂ ಅಲ್ಲ, ಚಂಪಾದೇವಿಯ ಅಕ್ಕ ರೂಪಾದೇವಿ. ಗಂಗಾರಾಮ್ ಬೆಂಗಳೂರಿಗೆ ಬಂದುದರ ಬಗ್ಗೆ ಇನ್ನೊಂದು ವಿವರ ನೀಡುತ್ತಾನೆ... ಅದೆಂದರೆ, ನೇಪಾಳದ ತನ್ನ ಊರಿನಲ್ಲಿ ಯಾವುದೇ ನೌಕರಿ ಸಿಗದೆ ಇರುವುದು ಎಂದು ಗಂಗಾರಾಮ್ ಅನೇಕ ಸಾರಿ ಹೇಳಿದ್ದುಂಟು. ಹಳ್ಳಿಯಲ್ಲಿ ಪ್ರವಾಸಿಗರು ಬರುತ್ತಿದ್ದರಂತೆ. ಅವರನ್ನು ಊರೂರೂ ಕರೆದುಕೊಂಡು ಪ್ರವಾಸಿ ತಾಣಗಳಿಗೆ ಕರೆದುಕೊಂಡು ಹೋಗಿ ತೋರಿಸುವುದು. 'ಊರಿನ ನಾಕಾರು ಎಕರೆ ಭೂಮಿಯಲ್ಲಿ ಏನು ಕೃಷಿ ಮಾಡುವುದು? ಊರಿನ ಎಲ್ಲ ಯುವಕರೂ ಪ್ರವಾಸಕ್ಕೆ ಬರುವ ಗಿರಾಕಿಗಳಿಗೆ ಗೈಡ್ ಆಗಲು ಸಾಧ್ಯವೆ? ಎಲ್ಲರೂ ಒಂದೆ ಕೆಲಸ ಮಾಡಿದರೆ ಹೇಗೆ?' ಎಂದು ಗಂಗಾರಾಮ್ ಅಣ್ಣ ಚಾಂದರಾಮ್‌ನ ಆಗ್ರಹಿಸಿದ್ದರ ಪರಿಣಾಮವೇ ಗಂಗಾರಾಮ್ ಬೆಂಗಳೂರಿಗೆ ಬಂದಿದ್ದ. ಹಾಗಾಗಿ ಸದ್ಯ ನೇಪಾಳದ ಹಳ್ಳಿಯಲ್ಲಿ ಗಂಗಾರಾಮ್‌ನ ತಾಯಿ ಮತ್ತು ಇನ್ನೊಬ್ಬ ಅಣ್ಣ ಸಂತಾರಾಮ್ ಮಾತ್ರ ವಾಸವಾಗಿದ್ದರು.

ಆಗಾಗ ಇಬ್ಬರೂ ಮಕ್ಕಳು, ಚಾಂದರಾಮ್ ಮತ್ತು ಗಂಗಾರಾಮ್ ಇಬ್ಬರೂ ನೇಪಾಳಕ್ಕೆ ಹೋಗಿ ಬಂದಾಗ ಅಲ್ಲಿದ್ದ ಅವರ ತಾಯಿಯ ಜೀವನೋಪಾಯಕ್ಕೆ ಒಂದಷ್ಟು ಹಣ ಕೊಟ್ಟು ಬರುತ್ತಿದ್ದರು. ಬೆಂಗಳೂರಿಗೆ ಬಂದ ಹೊಸತರಲ್ಲಿ ಅಣ್ಣ ಚಾಂದರಾಮ್ ಜೊತೆಗೆ ಇದ್ದ ಗಂಗಾರಾಮ್ ಕೆಲ ತಿಂಗಳ ಹಿಂದಷ್ಟೇ ಆದಿತ್ಯ ಅಪಾರ್ಟ್‌ಮೆಂಟಿನಲ್ಲಿ ನೌಕರಿಗೆ ಬಂದು ವಾಸ್ತವ್ಯ ಹೂಡಿದ್ದ.

***

ಆದಿತ್ಯ ಅಪಾರ್ಟ್‌ಮೆಂಟಿನ ಕೆಳಮಹಡಿಯಲ್ಲಿ ಒಂದೇ ಒಂದು ಚಿಕ್ಕ ಕೋಣೆಯೆ ಗಂಗಾರಾಮ್‌ನ ವಾಸದ ಮನೆ. ಅದು ಆರು ಅಡಿ ಚೌಕಳತೆಯ ಕೋಣೆ ಇರಬೇಕು. ಅದರಲ್ಲೇ ಅಡುಗೆಯ ಕೆಲಸಕ್ಕೆಂದು ಒಂದು ಕಟ್ಟೆ. ಹೊರಗಡೆ ಒಂದು ಪುಟ್ಟ ಕಾಮನ್ ಬಾತ್‌ರೂಂ, ಟಾಯ್ಲೆಟ್... ಉಳಿದಂತೆ ಅಪಾರ್ಟ್‌ಮೆಂಟಿನ ಆ ನೆಲಮಾಳಿಗೆಯ ಬಯಲೇ ಅವರಿಗೆ ಹಾಲು, ರೆಸ್ಟ್‌ರೂಂ ಎಲ್ಲವೂ. ಅದರಲ್ಲೇ ಆಟವಾಡಿಕೊಂಡಿರುತ್ತಿತ್ತು ಗಂಗಾರಾಮ್‌ನ ಪುಟ್ಟ ಮಗು ಬಬ್ಲೂ. ಅಪಾರ್ಟ್‌ಮೆಂಟಿಗೆ ಬಂದ ದಿನವೇ ಪರಿಚಯವಾಗಿದ್ದ ಶಶಾಂಕ, ಗಂಗಾರಾಮನಿಗೆ 'ಅಂಕಲ್' ಎಂದೂ ಆತನ ಹೆಂಡತಿಗೆ 'ಆಂಟಿ' ಎಂದು ಕರೆಯುತ್ತಿದ್ದ.

ಗಂಗಾರಾಮ್‌ನಿಗೆ ಹದಿನೈದು ಸಾವಿರ ಸಂಬಳವಂತೆ... ಜೊತೆಗೆ ಇರಲು ಕೋಣೆ ಉಚಿತ. ಒಂದು ಸಾರಿ ಶಶಾಂಕನಿಗೆ ಗಂಗಾರಾಮ್‌ನ ಒಂದೆ ಒಂದು ಕೋಣೆಯೊಳಗಡೆ ಕಾಲಿಡುವ ಪ್ರಸಂಗ ಬಂತು. ಅಂದು ಸಂಜೆ ಹೊತ್ತು, ಲಿಫ್ಟಿನಿಂದ ಕೆಳಗಿಳಿದ ಶಶಾಂಕ, ಗಂಗಾರಾಮ್‌ನ ಪುಟ್ಟ ಕೋಣೆಯ ಮುಂದೆ ಹೋಗಿ ನಿಂತು ಗಮನಿಸಿದ, ಬಾಗಿಲು ಸುಮ್ಮನೆ ಹಾಗೆ ಮುಚ್ಚಿತ್ತು. ಶಶಾಂಕ ಬಾಗಿಲನ್ನು ಬಡಿದು ಕಾಯುತ್ತ ನಿಂತ.

ಗಂಗಾರಾಮ್‌ಗೆ ನೇಪಾಳಿ ಮತ್ತು ಹಿಂದಿ ಭಾಷೆ ಮಾತ್ರ ಗೊತ್ತು. ಶಶಾಂಕನ ಹಿಂದಿಯೂ ಅಷ್ಟಕ್ಕಷ್ಟೇ. ಒಂದು ನಿಮಿಷವಾಗಿರಬೇಕು. ಗಂಗಾರಾಮ್ ಕೋಣೆಯಿಂದ ಹೊರಬಂದು 'ಬೋಲೋ ಭಯ್ಯಾ...' ಎಂದ. ಕೋಣೆಯ ಬಾಗಿಲು ಅರ್ಧದಷ್ಟು ತೆರೆದಿತ್ತು. ಆಗ ಶಶಾಂಕನಿಗೆ ಕಂಡದ್ದೇ ಗಂಗಾರಾಮನ ಮನೆ! ಒಂದೇ ಕೋಣೆಯಲ್ಲಿ ಚಾಪೆ ಹಾಸಲಾಗಿತ್ತು... ಗಂಗಾರಾಮನ ಹೆಂಡತಿ ಮಲಗಿದ್ದಳು, ಪಕ್ಕದಲ್ಲಿ ಮಗು, ಒಂದು ಗೋಡೆಗೆ ಅಂಟಿಕೊಂಡ ಒಂದು ಕಟ್ಟೆ, ಅದೇ ಕಿಚನ್. ಅದರ ಮೇಲೆ ಗ್ಯಾಸ್ ಸ್ಟೋವ್ ಮತ್ತಿತರ